ದೆಹಲಿ ನಗರದ ಆ ಸಂಜೆಯ ಸಮಯ. ಹಗಲು ಹೊತ್ತಲ್ಲಿ ಕಾಡಿದ ಸೆಕೆ ಮರೆಯಾಗಿ ಚಳಿ ನುಸುಳುತ್ತಿತ್ತು. ಯಮುನಾ ನದಿಯನ್ನು ಮೈದಡವಿ ಮೇಲೆದ್ದ ಗಾಳಿ ನಗರವನ್ನು ಇನ್ನಷ್ಟು ತಂಪಾಗಿಸುತ್ತಿತ್ತು. ಸ್ವಲ್ಪ ಸಮಯದ ಹಿಂದೆ ದೈವಿಕವಾಗಿ ಕಂಗೊಳಿಸುತ್ತಿದ್ದ ಪ್ರಾರ್ಥನೆಯ ವೇದಿಕೆ ತನ್ನ ಪಾವಿತ್ರ್ಯವನ್ನು ಕಳೆದುಕೊಂಡಿತ್ತು. ವಾದ್ಯಗಳನ್ನೂ ಅದನ್ನು ನುಡಿಸುವವರನ್ನೂ ಕೇಳಲು ಯಾರೂ ಇಲ್ಲದೆ, ಆತಂಕವೂ ಅಳುವೂ ಸೋಂಕಿತ್ತು. ಕಾಲುಹಾದಿಯ ಬದಿಯಲ್ಲಿದ್ದ ಹುಲ್ಲುಹಾಸು ನಡೆದ ದುಃಖವನ್ನು ಹೊತ್ತುಕೊಂಡು ಸಾಗಲು ದಾರಿ ಕಾಣದೆ ಕಂಗಾಲಾಗಿತ್ತು. ತಲೆಯ ಮೇಲೆ ಮಗುಚಿ ಬಿದ್ದಿದ್ದ ನೀಲಿಬಾನಿನಲ್ಲಿ ಸಣ್ಣ ಮೋಡದ ಗುಂಪುಗಳು ರಾಶಿಗೂಡಿದ್ದವು.

"ಮೋಹನ್, ನಿಮ್ಮಿಂದ ಎದ್ದೇಳಲು ಸಾಧ್ಯ. ಪ್ರಯತ್ನಿಸಿ ನೋಡಿ."

"ಖಂಡಿತ, ಖಂಡಿತವಾಗಿಯೂ ಪ್ರಯತ್ನಿಸುತ್ತೇನೆ ಕಸ್ತೂರ್. ನನ್ನ ಸುತ್ತ ಎಲ್ಲರೂ ನಿಂತು ಆತಂಕಪಡುವುದನ್ನು ನೋಡುತ್ತಿದ್ದೇನೆ. ನಾನು ಈಗಲೇ ಪ್ರಾರ್ಥನೆಯ ಸ್ಥಳಕ್ಕೆ ಹೋಗಬೇಕು. ಇಲ್ಲದಿದ್ದರೆ ಅವರ ಸಮಯ ವ್ಯರ್ಥವಾಗುತ್ತದೆ."

"ಅದಿರಲಿ, ಈಗ ನೀವು ಎದ್ದೇಳುವುದೇ ಮುಖ್ಯ."

''ಆದರೆ... ಆದರೆ... ನನ್ನಿಂದ ಕೈಕಾಲುಗಳನ್ನು ಅಲುಗಾಡಿಸಲು ಆಗುತ್ತಿಲ್ಲ. ಕಣ್ಣು ಮಿಟುಕಿಸಲು ಆಗುತ್ತಿಲ್ಲ. ಕಸ್ತೂರ್, ನನಗೆ ಬಹಳ ಗಾಬರಿಯಾಗುತ್ತಿದೆ. ಪಟೇಲ್, ನೆಹರೂ ಇಬ್ಬರೂ ಒಗ್ಗಟ್ಟಾಗಿ ಇರಬೇಕಾಗಿರುವುದು ದೇಶಕ್ಕೆ ಅಗತ್ಯ. ಅವರನ್ನು ಸಮಾಧಾನ ಮಾಡಬೇಕಾದ ನಾನು, ಈ ಸಮಯದಲ್ಲಿ ಹೀಗೆ ಬಿದ್ದುಕೊಂಡಿರುವುದು ಸರಿಯಲ್ಲ."

"ಸರಿ, ಅದರ ಬಗ್ಗೆ ಈಗ ಯೋಚಿಸಬೇಡಿ. ಈಗ ನೀವು ಎದ್ದೇಳಬೇಕು, ಅದೇ ಮುಖ್ಯ."

"ಕಸ್ತೂರ್, ಸುಧಾರಿಸಿಕೊಳ್ಳಲು ನನಗೆ ಸ್ವಲ್ಪ ಸಮಯ ಕೊಡು..."

"ಆದರೆ, ನೀವು ತುಂಬಾ ಸಮಯ ಹೀಗೆಯೇ ಮಲಗಿದ್ದರೆ, ದೇಹ ದೂಳಿನಿಂದ ಕೊಳಕಾಗುತ್ತದೆ. ನಿನ್ನೆಯಿಂದ ಕೆಮ್ಮು ಸಹ ನಿಂತಿರಲಿಲ್ಲ."

"ರಾಮ... ರಾಮ... ಮೈನೋವಿನಿಂದ ಎಲ್ಲವೂ ಮರೆತುಹೋಯಿತು. ಅದಿರಲಿ, ಇವೆಲ್ಲ ನಿನಗೆ ಹೇಗೆ ಗೊತ್ತು. ಈಗ ನೀನು ಎಲ್ಲಿರುವೆ?"

"ಹಾಗೆಯೇ ಸ್ವಲ್ಪ ಕಣ್ಣು ತೆರೆದು, ಹೊರಳಿ ನೋಡಿ.''

''ಏನು ಹೇಳುತ್ತಿದ್ದೀಯಾ? ನನ್ನಿಂದ ಕಣ್ಣು ತೆರೆಯಲು ಆಗುತ್ತಿಲ್ಲ ಎಂದು ಹೇಳುತ್ತಿದ್ದೇನಲ್ಲಾ."

ಮೋಹನನ ಕೋಪವನ್ನು ಕಂಡ ಕೂಡಲೇ, ''ಸರಿ, ಸರಿ... ನಾನೇ ಹೇಳುತ್ತೇನೆ. ನಾನು ನಿಮಗೆ ನೇರವಾಗಿ, ಮೇಲೆ ಬಿಳಿಮೋಡವಾಗಿ ನಿಂತಿದ್ದೇನೆ. ಮೋಹನ್, ನಿಮ್ಮನ್ನು ನೋಡಲು ಇಲ್ಲಿಗೆ ಬಂದಿದ್ದೇನೆ."

"ನನಗಾಗಿ ಬಂದೆಯಾ? ಇದಕ್ಕೆ ಸಂಬಂಧಪಟ್ಟವರ ಬಳಿ ಕ್ರಮವಾಗಿ ಅನುಮತಿ ಪಡೆದುಕೊಂಡೆಯಾ?..."

ಮೋಹನನ ಸಿಡುಕಿನ ಮಾತಿಗೆ ಕಸ್ತೂರ್ ಮುಖವನ್ನು ಬಿಗಿಯಾಗಿಸಿಕೊಂಡಳು.

"ನನ್ನನ್ನು ಯಾವಾಗ ನಂಬುತ್ತೀರೋ ತಿಳಿಯದು. ಆಘಾಖಾನ್ ಜೈಲಿಗೆ ನಾನೂ ಸುಶೀಲಳೂ ಕೈದಾಗಿ ಬಂದಾಗಲೂ ಇದನ್ನೇ ಕೇಳಿದಿರಿ. ನಾವಿಬ್ಬರೂ ಅಕ್ರಮವಾಗಿ ವಿಶೇಷ ಅನುಮತಿ ಪಡೆದು ನೀವಿರುವ ಆಘಾಖಾನ್ ಸೆರೆಗೆ ಬಂದದ್ದಾಗಿ ಅಂದುಕೊಂಡಿರಿ, ಅಲ್ಲವೇ?"